423

ಇಂಡ್ಯಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರಿನ್ ಇಲಾಖಾ.

ಇಸ್ತಿಹಾರ್ ನಾಮೆ.

ಜನರಲ್.

ತಾರೀಖು 11ನೇ ಆಕ್ಟೋಬರ್ 1876.

ನಂ. 2206. G. ಬಹಲ್—ಮೈಸೂರು ಟರ್ವ ಮಾಜೆಸ್ಟ್ರೇಟ್ ಕರ್ನಲ್‌ರೆಂಟರ್ಟ್‌ಯವರು, ಫರಲೊ ರಜಾದ ಮೇಲೆ ಯಿರುವ ಮೇಜರ್ ಸ್ಟುವರ್ಟ್ ಯವರಿಗೆ ಬದಲಾಗಿ, ಚಾರ್ಜ ತೆಗದುಕ್ಕೊಂಡ ಲಗಾಯಿತು ಮೈಸೂರು ಜೀವ್ ಕಮ್ಮಿಷನರವರ ಮಿಲಟೀರಿ ಅಸಿಸ್ಟೆಂಟ್ ಕೆಲಸವನ್ನು ಆ್ಟಿಂಗ್ ತರೀಕ್ ನೋಡಹಕ್ಕದ್ದು.

3ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನ್ನರ್ ಅಬ್ದುಲ್ ಖಾದರ್‌ಯವರು, ಕರ್ನಲ್‌ರೆಂಟರ್ಟ್ ಯವರಿಗೆ ಬದಲಾಗಿ, ಚಾರ್ಜ್ ತೆಗದುಕ್ಕೊಂಡ ತಾರೀಖು ಲಗಾಯಿತು ಮೈಸೂರು ಟರ್ವ ಮೇಜಸ್ಟ್ರೇಟ್ ಕೆಲಸವನ್ನು ಆ್ಟಿಂಗ್ ತರೀಕ್ ನೋಡಹಕ್ಕದ್ದು.

T. H. THORNTON,
Offg. Secy. to the Govt. of India.

ಪಬ್ಲಿಕ್ ವರ್ಕ್ಸ್,

ತಾರೀಖು 9ನೇ ಆಕ್ಟೋಬರ್ 1876.

ನಂ. 411. ಇಂಜಿನಿಯರ್ ಅಪ್ರೆಂಟಸ್ ಮಿಸ್ಟರ್ ವಾಸುದೇವ್ ಹರಿಕುರ್ವಿಯವರನ್ನು ಸ್ರ್ 1876ನೇ ಇಸವಿ ಸಪ್ಟಂಬರ್ 5ನೇ ತಾರೀಖು ಲಗಾಯಿತು 3ನೇ ಗ್ರೇಡ್ ಅಸಿಸ್ಟೆಂಟ್ ಇಂಜಿನಿಯರ್ ಹೊದೇಗೆ ಮೈಸೂರು ಜೀವ್ ಕಮ್ಮಿಷನ್ನರವರು ಮಾಡಿದ ಬಡತಿಯು ಕಾಯಂ ಮಾಡಲಾಗಿದೆ.

W. A. CROMMELIN, *Major—Genl.*, R. E.,
Offg. Secy. to the Govt. of India.

ಹೋಂ ಡಿಪಾರ್ಟ್‌ಮೆಂಟ್.

ಇಸ್ತಿಹಾರ್ ನಾಮೆ.

ಪಬ್ಲಿಕ್ ವರ್ಕ್ಸ್.

ಸಿಂಲಾ ತಾರೀಖು 16ನೇ ಆಕ್ಟೋಬರ್ 1876.

ನಂ. 1607.—ಮಂತ್ರಾಲೋಚಕ ಸಭೆಯೊಳಗೆಣ ಗವರ್ನರ್ ಜನರಲ್ ಸಾಹೆಬರವರು ಇದರಿಂದ ತಿಳಿಸುವದೇನಂದರೆ,—ಗವರ್ನರ್ ಜನರಲ್ ಸಾಹೆಬರವರು ಇಂಡ್ಯ ದೇಶದ ಕೆಲವು ಪ್ರದೇಶಗಳಿಗೆ ತಮ್ಮ ಸಂಗಡ ಮಂತ್ರಾಲೋಚಕರಿಲ್ಲದೆಯೇ ಹೋಗಿ

ನೋಡಿ ಬರಬೇಕಾದದ್ದು ಆವಶ್ಯಕವಾಗಿರುತ್ತೆ. ಇಂಡಿಯನ್ ಕೌನ್ಸೆಲ್ಸ್ ಆಕ್ಟಿನ 6ನೇ ಸೆಕ್ಷನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ನಡಿಸುವದರಲ್ಲಿ ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್‌ಯವರು, ಹಾಗೆ ಪರಸ್ಥಳಕ್ಕೆ ಹೋದ ಕಾಲದಲ್ಲಿ ಮೇಜರ್ ಜನರಲ್, ದಿ ಆನರೆಬಿಲ್ ಸರ್ ಹೆನ್ರಿ ಡಬ್ಲ್ಯೂನಾರ್ಮ್ಯ ಕೆ. ಸಿ. ಬಿ. ಯವರನ್ನು ಸದರೀ ಕೌನ್ಸೆಲ್ಲಿನ ಪ್ರೆಸೀಡೆಂಟರಾಗಿ ಇವರಿಂದ ನಿಯಮಿಸುತ್ತಾರೆ, ಮತ್ತು ಹಾಗೆ ಪರಸ್ಥಳ ಹೋದಾಗ ಸದರೀ ಮಂತ್ರಾಲೋಚಕ ಸಭೆ ಸೇರುವ ಸಮಯಗಳಲ್ಲಿ ಗವರ್ನರ್ ಜನರಲ್ಲವರು ನಡಿಸತಕ್ಕ ಅಧಿಕಾರಗಳು, ಯಾವ ಕಾನೂ ಯಾ ಹುಕ್ಕುಂ ನಾಮೆಯನ್ನಾಗಲಿ ವಿಕ್ಟೋರಿಯ 67ನೇ ಚಾಪ್ಟರ್, 24 ಮ 25ನೇ ಪ್ರಕರಣಗಳಲ್ಲಿ ವಿಧಿಸಲ್ಪಟ್ಟ ಮೇರೆ ಅಂಗೀಕರಿಸುವದು, ಯಾ ತಮ್ಮ ಅಂಗೀಕಾರವನ್ನು ವಾಪಸ್ ತೆಗದುಕ್ಕೊಳ್ಳುವದು, ಅಥವಾ ಮಹಾರಾಣೀಯವರ ತಾತ್ಪರ್ಯಕ್ಕಾಗಿ ಉಳಿಸುವದು ಯಿಂತಾದ್ದು ಹೊರತು. ಅನ್ಯಥಾ ಸದರೀ ಮೇಜರ್ ಜನರಲ್ ದಿ ಆನರೆಬಿಲ್ ಸರ್ ಹೆನ್ರಿ ಡಬ್ಲ್ಯೂ ನಾರ್ಮ್ಯ ಯವರಿಗೆ ಕೊಡಲ್ಪಡತಕ್ಕದು; ಮತ್ತು ಗವರ್ನರ್ ಜನರಲ್ಲವರು, ಮಂತ್ರಾಲೋಚಕ ಸಭೆಯೊಳಗಣ ಸದರೀ ಗವರ್ನರ್ ಜನರಲ್‌ಯವರಿಂದ ನಡಿಸಲ್ಪಡಬಹುದಾದ ಅಧಿಕಾರಗಳ ಪೈಕೀ ನ್ಯಾಯ ನಿಬಂಧನೆಗಳನ್ನು ಕಲ್ಪಿಸುವ ಅಧಿಕಾರಗಳು ಹೊರತು ಮಿಕ್ಕ ವಿಷಿಷ್ಟವನ್ನಾಗಲಿ ಯಾವದನ್ನಾಗಲಿ, ಸದರೀ ಗವರ್ನರ್ ಜನರಲ್ಲವರು ಅದನ್ನು ನಡಿಸುವದು ಆವಶ್ಯಕವೆಂದು ಯೋಚಿಸುವ ಪ್ರತಿ ಸಂಗತಿಯಲ್ಲಿಯೂ ನಡಿಸುವಂತೆ ಸದರೀ ಬಗ್ಯೇನೇ ಮಾಡಲ್ಪಟ್ಟ ಈ ಹುಕ್ಕುಂನಿಂದ ಅಧಿಕಾರಕೊಡಲ್ಪಟ್ಟಿರುತ್ತಾರೆ.

ಮಂತ್ರಾಲೋಚಕ ಸಭೆಯೊಳಗಣ, ಫನವನ್ನು ಹೊಂದಿದ ಇಂಡ್ಯ ಗವರ್ನರ್ ಜನರಲ್ ಸಾಹೆಬರವರ್ಕ

"ಬಮೋಜೀಬ್ ಹುಕ್ಕುಂ,"

ARTHUR HOWELL,
Offg. Secy. to the Govt. of India.